ಆರ್‌ಆರ್‌ಸಿ ಧ್ಯಾನಕೇಂದ್ರದಲ್ಲಿ ಕನ್ನಡ ಭಾಷೆಯ ಸೇವೆಗಳು

ಫಾದರ್ ಬಿನಿಶ್ ಸಿಎಸ್‌ಟಿ
ನಿರ್ದೇಶಕರು, ಆರ್‌ಆರ್‌ಸಿ ಕನ್ನಡ ವಿಭಾಗ

ಕನ್ನಡ ಧ್ಯಾನಕೂಟ

ಕರುಣಾಮಯ ದೇವರು ಕರ್ನಾಟಕ ರಾಜ್ಯದ ಜನತೆಯ ಆಧ್ಯಾತ್ಮಿಕ ಬೆಳವಣಿಗೆಗಾಗಿ, ಆರ್.ಆರ್.ಸಿ. ಧ್ಯಾನಕೇಂದ್ರದಲ್ಲಿ ಕನ್ನಡ ಭಾಷೆಯಲ್ಲಿ ಅನೇಕ ಸೇವೆಗಳನ್ನು –ಬೆಳವಣಿಗೆಯ ಧ್ಯಾನಕೂಟಗಳು, ಯುವಜನರ ಧ್ಯಾನಕೂಟ, ರಾತ್ರಿ ಜಾಗರಣೆ ಪ್ರಾರ್ಥನೆ, ಕುಟುಂಬ ನವೀಕರಣ ಧ್ಯಾನಕೂಟ ಮತ್ತು ಮಧ್ಯಸ್ತಿಕೆ ಪ್ರಾರ್ಥನಾ ಕೂಟ – ಅನುಗ್ರಹಿಸಿದ್ದಾರೆ.

''ನಿನ್ನ ಮಂದಿರದಲ್ಲಿ ಕಳೆದ ದಿನವೊಂದು ತಿಳಿವೆನು ಸಾವಿರ ದಿನಕ್ಕೂ ಮೇಲೆಂದು; ದುರುಳರ ಬಿಡಾರದಲ್ಲಿ ನಾ ವಾಸ ಮಾಡುವುದರ ಬದಲು ನಿನ್ನಾಲಯದ ದ್ವಾರಪಾಲಕನಾಗಿರುವುದೇ ಮೇಲು'' – ಕೀರ್ತನೆ 84:9–10

ಜನವರಿ 2018ರಿಂದ ಕನ್ನಡ ಧ್ಯಾನಕೂಟ ಮೂರನೇ ಭಾನುವಾರದ ಹಿಂದಿನ ಗುರುವಾರ ಸಂಜೆ 5.00 ಗಂಟೆಗೆ ಪ್ರಾರಂಭವಾಗಿ ಶುಕ್ರವಾರ, ಶನಿವಾರ ಮತ್ತು ಮೂರನೇ ಭಾನುವಾರ ಸಂಜೆ 5.00 ಗಂಟೆಗೆ ಮುಕ್ತಾಯವಾಗುತ್ತದೆ. 3 ದಿನಗಳು.

ಈ ಧ್ಯಾನಕೂಟವನ್ನು ಆರ್‌ಆರ್‌ಸಿ ತಂಡದವರು ನಡೆಸಿಕೊಡಲಾಗುತ್ತದೆ. ಅಭಿಷೇಕ ತುಂಬಿದ ಪ್ರಭೋದನೆ, ವರದಾನಿತ ಕೌನ್ಸಿಲಿಂಗ್ ಆರಾಧನೆ ರೋಗಸೌಖ್ಯ ಪ್ರಾರ್ಥನೆಯಿರುತ್ತದೆ.

ಕನ್ನಡ ಧ್ಯಾನಕೂಟದ ದಿನಗಳು

ಅಕ್ಟೋಬರ್ 8 ರಿಂದ 12
ನವೆಂಬರ್ 12 ರಿಂದ 16
ಡಿಸೆಂಬರ್ 10 ರಿಂದ 14
ಜನವರಿ 18ರ ಸಂಜೆ 5 ರಿಂದ – 21ರ ಸಂಜೆ 5ರ ವರೆಗೆ
ಫೆಬ್ರವರಿ 15 ರಿಂದ 18
ಮಾರ್ಚ್ 15 ರಿಂದ 18

ಆರ್‌ಆರ್‌ಸಿಯ ಎಲ್ಲಾ ಧ್ಯಾನಕೂಟಗಳು ಉಚಿತವಾಗಿ ನಡೆಸಲಾಗುತ್ತಿದೆ. ನೋಂದಣಿ ಶುಲ್ಕ ಇರುವುದಿಲ್ಲ. ಊಟ ಮತ್ತು ವಸತಿ ಉಚಿತ.

ಕನ್ನಡ ಯುವಜನರ ಧ್ಯಾನಕೂಟ

''ಆದುದರಿಂದ ಯೌವ್ವನದಲ್ಲಿ ನಿನ್ನ ಸೃಷ್ಟಿಕರ್ತನನ್ನು ಸ್ಮರಿಸಿಕೊ. ಕಷ್ಟಕರವಾದ ದಿನಗಳು ಬರುವುದಕ್ಕೆ ಮುನ್ನ, ಜೀವನ ಬೇಸರವಾಗಿದೆ ಎಂದು ನೀನು ಹೇಳುವುದಕ್ಕೆ ಮುಂಚೆ ಆತನನ್ನು ಸ್ಮರಿಸು'' – ಉಪದೇಶಕ 12:1

ಪ್ರತಿ ತಿಂಗಳ 3ನೇ ಭಾನುವಾರ ಬೆಳಿಗ್ಗೆ 10 ರಿಂದ 3.00 ಗಂಟೆಗೆ ಯುವಜನರ ಧ್ಯಾನಕೂಟದ ದಿನಗಳು

ಅಕ್ಟೋಬರ್ 15
ನವೆಂಬರ್ 19
ಡಿಸೆಂಬರ್ 17

ಕನ್ನಡ ರಾತ್ರಿ ಜಾಗರಣೆ ಪ್ರಾರ್ಥನೆ

''ರಾತ್ರಿಯ ಒಂದೊಂದು ಜಾವದಲ್ಲೂ ಎದ್ದು ಗೋಳಾಡಿರಿ. ನಿಮ್ಮ ಹೃದಯ ಕರಗಿ, ನೀರಾಗಿ ಸ್ವಾಮಿಯ ಮುಂದೆ ಹರಿಯಲಿ...'' – ಪ್ರಲಾಪಗಳು 2:19

ಪ್ರತಿ ತಿಂಗಳ ಮೊದಲನೇ ಶನಿವಾರ ರಾತ್ರಿ 9.30 ರಿಂದ 5.00 ಸೇವೆಗಳು; ಪ್ರಭೋದನೆ, ಸ್ತುತಿ ಸ್ತೋತ್ರ, ಬಿಡುಗಡೆಯ ಪ್ರಾರ್ಥನೆ, ಪರಮಪ್ರಸಾದ ಆರಾಧನೆ, ಹಸ್ತನಿಕ್ಷೇಪ ಪ್ರಾರ್ಥನೆ, ದಿವ್ಯಬಲಿಪೂಜೆ.

ಕನ್ನಡ ಕುಟುಂಬ ಧ್ಯಾನಕೂಟ

''ನಿನ್ನ ತಂದೆತಾಯಿಗಳನ್ನು ಗೌರವಿಸು. ಗೌರವಿಸಿದರೆ ನಿನ್ನ ದೇವರೂ, ಸರ್ವೇಶ್ವರನೂ ಆದ ನಾನು ನಿನಗೆ ಅನುಗ್ರಹಿಸುವ ನಾಡಿನಲ್ಲಿ ಬಹುಕಾಲ ಬಾಳುವೆ'' – ವಿಮೋಚನಕಾಂಡ 20:12

ಕುಟುಂಬಸ್ಥರ ಸಂಬಂಧಗಳನ್ನು ಬಲಪಡಿಸಲು ಮತ್ತು ಪರಿಶುದ್ಧ ಕುಟುಂಬ ಜೀವನ ಮುನ್ನಡೆಸಲು ಬೇಕಾದ ಅಭಿಷೇಕಕ್ಕಾಗಿ ಕುಟುಂಬ ಧ್ಯಾನಕೂಟವನ್ನು ಆರ್‌ಆರ್‌ಸಿಯಲ್ಲಿ ಆಯೋಜಿಸಲಾಗಿದೆ.

ಕನ್ನಡ ಮಧ್ಯಸ್ತಿಕೆ ಪ್ರಾರ್ಥನೆ ಕೂಟ

''ಮೋಶೆ ತನ್ನ ಕೈಗಳನ್ನು ಮೇಲಕ್ಕೆ ಎತ್ತಿರುವಾಗಲೆಲ್ಲಾ ಇಸ್ರಯೇಲರು ಜಯಶೀಲರಾಗುತ್ತಿದ್ದರು....'' – ವಿಮೋಚನಕಾಂಡ 17:11

ಎಲ್ಲಾ ಸೋಮವಾರದಿಂದ ಗುರುವಾರದವರೆಗೆ ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 2.00 ಗಂಟೆಯವರೆಗೆ ಪ್ರಪಂಚದ ಎಲ್ಲಾ ಉದ್ದೇಶಗಳಿಗಾಗಿ ಕನ್ನಡ ಮಧ್ಯಸ್ತಿಕೆ ತಂಡದವರು ಮಧ್ಯಸ್ತಿಕೆ ಪ್ರಾರ್ಥನೆ ನಡೆಸುತ್ತಿದ್ದಾರೆ. ನಿಮ್ಮ ಪ್ರಾರ್ಥನಾ ಕೋರಿಕೆ–ಬೇಡಿಕೆಗಳನ್ನು ಅಂಚೆ ಮೂಲಕ, ಇ–ಮೇಲ್ ಮೂಲಕ, ದೂರವಾಣಿ ಮೂಲಕ ಮತ್ತು ಆರ್‌ಆರ್‌ಸಿ ವೆಬ್‌ಸೈಟ್ ಮೂಲಕ ನೀವು ನಮಗೆ ಕಳುಹಿಸಿಕೊಡಬಹುದು. ನಾವು ನಿಮ್ಮ ಉದ್ದೇಶಗಳಿಗಾಗಿ ಪ್ರಾರ್ಥಿಸುತ್ತೇವೆ.

ಆರ್‌ಆರ್‌ಸಿ ಧ್ಯಾನಕೇಂದ್ರದ ಎಲ್ಲಾ ಕನ್ನಡ ಸೇವೆಗಳಲ್ಲಿ ಭಾಗವಹಿಸಿ ದೇವರ ಹೇರಳವಾದ ಆಶೀರ್ವಾದವನ್ನು ಹೊಂದಿಕೊಳ್ಳಲು ಎಲ್ಲರಿಗೂ ಸ್ವಾಗತ.

ಬಸ್ ಮಾರ್ಗ / **Bus Routes : ಮೆಜೆಸ್ಟಿಕ್ Majestic : 341D, 342F, 162, 162A, 162C, 165, 165B, C, D, E, 168D, E, 171, 171A, B, C, D, E. F, H, 360 to 375**, ಶಿವಾಜಿ ನಗರ **Shivajinagar : 161, 161D, 166, 168D, 54, 340F, 365**, ಸಿಟಿ ಮಾರ್ಕೆಟ್ **City Market : 340 to 375, 163B**, ಯಶವಂತಪುರ **Yeshwanthpur:** 173, 175, 38, ಜೀವನ ಭೀಮಾ ನಗರ

J.B. Nagar : 7D, 7F ಇಳಿಯುವ ಸ್ಥಳ: ಡೈರಿ ಸರ್ಕಲ್ / ಕ್ರೈಸ್ಟ್ ಕಾಲೇಜ್ / ಆಶ್ರಮ ಸ್ಟಾಪ್ **Alight at : Bangalore Dairy Circle / Christ College / Ashrama Stop**

Contact: 080 26683988, 080 41106241
ಸಹೋ॥ ಜೆ ಪೀಟರ್: **93414 20004** ವೈಲೆಟ್ ಮೇರಿ: **9845972277**

Printed and Published by Fr. Joseph Mundolickal CST, on behalf of Renewal Retreat Centre, Christ School Road, Bangalore - 29, Tel. 9739830422
Printed at Matha Prints, Bangalore - 560 029 Tel. 9886809060 and published at Bangalore. Editor: Fr. Prince Chakkalayil CST

ರಿನ್ಯೂವಲ್ ವಾಯ್ಸ್

Renewal Retreat Centre (CST Fathers) Christ School Road, Bangalore 560029
Tel. 08041106241 Email: renwalvoicerrc@gmail.gmail.com, Website: www.rrcbangalore.in
VOL. 1, ISSUE I, OCTOBER 2017

ದೇವರು ಮಾತನಾಡಲಿ

ಫಾದರ್ ಪ್ರಿನ್ಸ್ ಥಾಮಸ್, ಸಿಎಸ್‌ಟಿ
ಮುಖ್ಯ ಸಂಪಾದಕರು

ರಿನ್ಯೂವಲ್ ರಿಟ್ರೀಟ್ ಸೆಂಟರ್ ಕರ್ನಾಟಕ ಜನತೆಗೆ ಸಾಂತ್ವನ ಮತ್ತು ಸಮಾಧಾನ ನೀಡುವ ಸ್ಥಳವಾಗಿ ದೇವರು ವಿಶೇಷವಾಗಿ ಆರಿಸಿಕೊಂಡಿದ್ದಾರೆ. ''ಕಾಣಿಸಿತೊಂದು ಮಹಾಜ್ಯೋತಿ ಕತ್ತಲಲ್ಲಿ ಸಂಚರಿಸುತ್ತಿದ್ದ ಜನರಿಗೆ, ಪ್ರಜ್ವಲಿಸಿತಾ ಜ್ಯೋತಿ ಕಗ್ಗತ್ತಲಲಿ ಬಾಳುತ್ತಿದ್ದಾ ನಾಡಿಗರಿಗೆ'' ಯೆಶಾಯ 9:2. ದೇವರ ವಾಕ್ಯಕ್ಕೆ ಅನುಗುಣವಾಗಿ ಸನ್ಮಾರ್ಗದಲ್ಲಿ ಜನತೆಯನ್ನು ನಡೆಸುವುದು ಆರ್‌ಆರ್‌ಸಿಯ ಮುಖ್ಯ ಉದ್ದೇಶವಾಗಿದೆ.

ರಿನ್ಯೂವಲ್ ವಾಯ್ಸ್ ಎಂಬ ಈ ಪತ್ರಿಕೆ ಆರ್‌ಆರ್‌ಸಿಯ ಸ್ವರವಾಗಿದ್ದು ಇಂಗ್ಲೀಷ್ ಮತ್ತು ಮಲಯಾಳಂ ಭಾಷೆಯಲ್ಲಿ ಪ್ರಕಟಿಸಲಾಗುತ್ತಿದೆ. ಈ ತಿಂಗಳಿನಿಂದ ರಿನ್ಯೂವಲ್ ವಾಯ್ಸ್‌ನ್ನು ಕನ್ನಡದಲ್ಲಿಯೂ ಪ್ರಾರಂಭಿಸಿರುವುದು ನನಗೆ ಅತೀವ ಸಂತೋಷಕರವಾಗಿದೆ. ಕಾರಣ ಆರ್‌ಆರ್‌ಸಿ ಧ್ಯಾನಕೇಂದ್ರದ ಎಲ್ಲಾ ಸೇವೆಗಳು ಈಗ ಕನ್ನಡ ಜನತೆಗೂ ಲಭ್ಯವಾಗಲಿದೆ. ಈ ಮಾಸಪತ್ರಿಕೆಯಲ್ಲಿ ಜೀವನ ಸಾಕ್ಷಿಗಳು, ದೇವರಿಂದ ಪಡೆದ ಅದ್ಭುತಕರವಾದ ಆಶೀರ್ವಾದಗಳು ಮತ್ತು ಪವಿತ್ರಾತ್ಮ ಪ್ರೇರಿತ ಪ್ರಭೋಧನೆಗಳು ಒಳಗೊಂಡಿರುತ್ತವೆ. ಇದನ್ನು ಓದುವವರೆಲ್ಲರಿಗೂ ಆಧ್ಯಾತ್ಮಿಕ ಭೋಜನವನ್ನಿತ್ತು ಅವರನ್ನು ದೇವರೆಡೆಗೆ ಕೊಂಡೊಯ್ಯುತ್ತದೆ. ನನ್ನ ಆಶೆ ಮತ್ತು ಪ್ರಾರ್ಥನೆ ಏನೆಂದರೆ ಈ ಮಾಸಪತ್ರಿಕೆ ಕರ್ನಾಟಕದ ಪ್ರತಿಯೊಂದು ಕುಟುಂಬವನ್ನು ತಲುಪುವುದರ ಮೂಲಕ ದೇವರ ನಾಮಕ್ಕೆ ಅಧಿಕಧಿಕವಾಗಿ ಮಹಿಮೆ ಸಲ್ಲವಂತಾಗಲಿ.

ಶುಭ ಸಂದೇಶ ಪ್ರಚಾರಕ್ಕೆ ಮತ್ತೊಂದು ಸೇರ್ಪಡೆಯಾಗಿರುವ ರಿನ್ಯೂವಲ್ ವಾಯ್ಸ್‌ನ ಪ್ರಾರಂಭ ಹಂತದಲ್ಲಿ ಇದಕ್ಕಾಗಿ ತಾವೆಲ್ಲರೂ ಪ್ರಾರ್ಥಿಸಿ ನಿಮ್ಮ ಸಹಾಯದ ಹಸ್ತವನ್ನು ಚಾಚುವಂತೆ ಹೃತ್ಪೂರ್ವಕವಾಗಿ ವಿನಂತಿಸುತ್ತೇನೆ.

ಆಶೀರ್ವಾದಗಳು

ಫಾದರ್ ಜೋಸೆಫ್ ಮುಂಡೋಲಿಕ್ಕಲ್, ಸಿ.ಎಸ್.ಟಿ
ನಿರ್ದೇಶಕರು, ಆರ್‌ಆರ್‌ಸಿ ಧ್ಯಾನಮಂದಿರ

ಸ್ವರ್ಗಾರೋಹಣಕ್ಕೆ ಮೊದಲು ಪ್ರಭು ಯೇಸುಕ್ರಿಸ್ತರು ತಮ್ಮ ಶಿಷ್ಯರಿಗೆ ಲೋಕದ ಕಟ್ಟಕಡೆಯವರೆಗೂ ಶುಭಸಂದೇಶವನ್ನು ಸಾರುವಂತೆ ಆಜ್ಞಾಪಿಸಿದರು. (ಮಾರ್ಕ 16:15) ಆರ್‌ಆರ್‌ಸಿ ಧ್ಯಾನಕೇಂದ್ರ ವಿಶೇಷವಾಗಿ ದೇವರಿಂದ ಆರಿಸಲ್ಪಟ್ಟ ಮನೆಯಾಗಿದೆ. ಅದರಲ್ಲೂ ಕರ್ನಾಟಕ ಜನತೆಗೆ ಸುವಾರ್ತೆ ಸಾರುವುದಕ್ಕಾಗಿ ದೇವರ ಕೈಯಲ್ಲಿ ಶಕ್ತಿಯುತ ಸಾಧನವಾಗಿ ಮಾರ್ಪಟ್ಟಿದೆ. ಆದ ಕಾರಣ ಸದಾ ಕನ್ನಡ ಸೇವೆಗಳನ್ನು ಅಭಿವೃದ್ಧಿಗೊಳಿಸಲು ಆರ್‌ಆರ್‌ಸಿ ಧ್ಯಾನಕೇಂದ್ರ ಮುನ್ನಡೆದಿದೆ. ಕನ್ನಡದಲ್ಲಿ ರಿನ್ಯೂವಲ್ ವಾಯ್ಸ್ ಮಾಸ ಪತ್ರಿಕೆಯನ್ನು ಪ್ರಾರಂಭಿಸಿರುವ ಹಂತದಲ್ಲಿ, ನನ್ನ ಹೃತ್ಪೂರ್ವಕ ಅಭಿನಂದನೆಗಳು ಮತ್ತು ಪ್ರಾರ್ಥನೆಯನ್ನು ಸಲ್ಲಿಸುತ್ತೇನೆ. ಕರ್ನಾಟಕ ಜನತೆಗೆ ದೇವರ ವಾಕ್ಯವನ್ನು ಸಾರಲು ರಿನ್ಯೂವಲ್ ವಾಯ್ಸ್ ಪತ್ರಿಕೆ ಸರ್ವಶಕ್ತ ದೇವರ ಕರಗಳಲ್ಲಿ ಶಕ್ತಿಯುತ ಸಾಧನವಾಗಿ ಉಪಯೋಗಿಸಲ್ಪಡಲಿ ಮತ್ತು ಮಹಿಮಾನ್ವಿತ ದೇವರು ಈ ದಿಟ್ಟ ಹೆಜ್ಜೆಯನ್ನು ಆಶೀರ್ವದಿಸಲಿ.

ಅಕ್ಟೋಬರ್ ತಿಂಗಳು ದೇವಮಾತೆಗೆ ಸಮರ್ಪಿತ ತಿಂಗಳಾಗಿರುವುದರಿಂದ ನಾವು ಮಾತೆ ಮರಿಯಮ್ಮನವರ ಶಕ್ತಿಯುತ ಮಧ್ಯಸ್ತಿಕೆಯನ್ನು ವಿಸೇಷವಾಗಿ ಜಪಮಾಲೆ ಪ್ರಾರ್ಥನೆ ಮೂಲಕ ಬೇಡಿ ಹೊಂದಿಕೊಳ್ಳೋಣ. ಸದಾಕಾಲ ದೇವರ ಚಿತ್ತದಂತೆ ನನಗಾಗಲಿ ಎಂದು ದೇವರ ಚಿತ್ತಕ್ಕೆ ಮಣಿದ ಮಾತೆ ಮರಿಯಮ್ಮನವರು ದೇವರಲ್ಲಿ ಪ್ರಾಮಾಣಿಕನಾಗಿರುವವರಿಗೆ ಲಭಿಸುವ ಹೇರಳವಾದ ಆಶೀರ್ವಾದಗಳನ್ನು ಆರಿತುಕೊಂಡು ಪರಿಶುದ್ಧ ಜೀವನ ಮುನ್ನಡೆಸಲು ಈ ಮಾಸಪತ್ರಿಕೆ ನಮಗೆ ಮಾರ್ಗ ತೋರಲಿ.

ಪ್ರಭು ಅಲ್ಪನೆಂದೆಣಿಸನು ತನ್ನ ಭಕ್ತರನು

ಸಹೋ. ಜೆ.ಎಕ್ಸ್. ಪೀಟರ್
ಕನ್ನಡ ವಿಭಾಗ, ಆರ್‌ಆರ್‌ಸಿ ಧ್ಯಾನ ಮಂದಿರ

ದೇವರತ್ತ ತಿರುಗುವವರನ್ನೂ ಅವರನ್ನು ಅರಸುವವರನ್ನೂ ಹಾಗೂ ದೇವರು ತಾವಾಗಿ ಆರಿಸಿಕೊಂಡವರನ್ನೂ ಅವರೆಂದಿಗೂ ಕೈ ಬಿಡುವುದಿಲ್ಲ. ಇಸ್ರಯೇಲರನ್ನು ದೇವರು ಪೂರ್ವಕಾಲದಲ್ಲಿ 40 ವರುಷಗಳ ಕಾಲ ಮರಳುಗಾಡಿನಲ್ಲಿ ಪೋಷಿಸಿ, ಪರಿಪಾಲಿಸುತ್ತಾ ಹೇಗೆ ಕಾಪಾಡಿದರೆಂಬುದನ್ನು ನಾವು ಅನೇಕಸಾರಿ ಓದಿರುತ್ತೇವೆ ಮತ್ತು ಕೇಳಿದ್ದೇವೆ. ಕಣ್ಣೀರಿನಲ್ಲಿ ಸಮಸ್ಯೆಗಳಲ್ಲಿ ಭಯಭೀತಿಯಲ್ಲಿ ಕ್ರೂರಹಿಂಸೆಗಳಲ್ಲಿ ತತ್ತರಿಸುತ್ತಿದ್ದ ತನ್ನವರು ಮೊರೆಯಿಡುವಾಗಲೆಲ್ಲಾ ಅವರ ಮೇಲೆ ಕನಿಕರಗೊಂಡು ಅವರ ಮೊರೆಯನ್ನು ಆಲಿಸಿ ಬಿಡುಗಡೆ ನೀಡಿದರು.

ಪ್ರಿಯರೇ, ನಮ್ಮ ಜೀವನದ ಯಾತ್ರೆಯಲ್ಲಿ ಅಂದರೆ ಇಂದಿನ ಕಾಲದಲ್ಲಿ ನಾವು ಅನುಭವಿಸುತ್ತಿರುವ ಕಷ್ಟ ಸಂಕಟಗಳು... ನಮಗೆ ಮುಂದೆ ಪ್ರತ್ಯಕ್ಷವಾಗಲಿರುವ ಮಹಿಮೆಯೊಂದಿಗೆ ಹೋಲಿಸುವುದಕ್ಕೂ ಬಾರದವುಗಳು (ರೋಮ 8:18) ನಾವು ಆಲೋಚಿಸಿ ನೋಡೋಣ ''ಈಗಿನದು ಹಿಂದೆ ಇತ್ತು ಮುಂದಿನದು ಈಗಲೂ ಇದೆ'' ಇಸ್ರಯೇಲರು ಹಾದು ಹೋಗಬೇಕಾದ ದಾರಿಯಲ್ಲಿ ನಾವು ಸಾಗಬೇಕಾಗಿದೆ. ಅದು ಇಕ್ಕಟ್ಟಾದ ಬಾಗಿಲು ನಮ್ಮ ಎದುರಿನಲ್ಲಿ ತೆರೆಡಿದಲಾಗಿದೆ. ನಾವು ಈ ಲೋಕದಲ್ಲಿ ಕೇವಲ ಪ್ರವಾಸಿಗರು ಮಾತ್ರ ಎಂಬುದನ್ನು ಮನದಟ್ಟಾಗಿಸಿಕೊಳ್ಳೋಣ. ನಮ್ಮ ಮನೆ ಇಲ್ಲಿ ಅಲ್ಲ ನಮ್ಮ ಮನೆ ಅಲ್ಲಿದೆ ಎಂದು ಅರಿತು ಧೃಢವಾಗಿ ಧೈರ್ಯದಿಂದ ಮುಂದೆ ಸಾಗೋಣ.

ಇಂದು ನಮ್ಮ ಕುಟುಂಬ ಜೀವನದ ಜವಾಬ್ದಾರಿಗಳಲ್ಲಿ ನಾವು ವಿಫಲತೆಯನ್ನು ಅನುಭವಿಸುತ್ತಿರಬಹುದು. ಕುಟುಂಬದಲ್ಲಿ ಸಹೋದರ, ಸಹೋದರಿಯೊಡನೆ ಬಿರುಕಿನ ಸಂಬಂಧಗಳು, ಮಕ್ಕಳ ಮಧ್ಯೆ ಅಶಾಂತಿ, ಸಾಲದ ಬಾಧೆ, ರೋಗ, ಉಪಶಮನ ಇಲ್ಲದಿರಬಹುದು, ಅವಮಾನ, ಜಗಳ, ಅಪನಂಬಿಕೆ, ಬೆನ್ನಿ ಹತ್ತಿರುವ ಪಾಪಗಳು, ದುಶ್ಚಟಗಳ ಸುಳಿಗೆ ಸಿಲುಕಿರಬಹುದು. ಆಕಾಂಕ್ಷೆಗಳು ಸೋತು, ನಿರೀಕ್ಷೆಗಳು ನೀರು ಪಾಲಾಗಿರಬಹುದು. ನಾನಾ ವಿಧವಾದ ಸಮಸ್ಯೆಗಳೂ ಇತರರ ತಪ್ಪಿನಿಂದ ಎದುರಿಸಬೇಕಾಗಿ ಬಂದಿರುವ ಕಷ್ಟ ಸಂಕಟಗಳು ಮನಸ್ಸಿಗೆ ತಂದುಕೊಂಡಾಗ ಮನಸ್ಸು ಕಹಿಯಾಗಿ ಸೊರಗಿ ಸೋತು ಹೋಗಿರಬಹುದು. ಆದರೆ ನಿನ್ನನ್ನು ಕಾಯುವಾತನು ನಿದ್ರಿಸುವುದಿಲ್ಲ. ತೂಕಡಿಸುವುದಿಲ್ಲ. ನಿನ್ನ ಆಗುಹೋಗುಗಳನ್ನು ನೋಡಿಕೊಳ್ಳುವನು, ನಿನ್ನ ಚಿಂತಾಭಾರಗಳನ್ನು ಆತನಿಗೆ ಬಿಟ್ಟು ಬಿಡು ನಿನ್ನ ಮೇಲೆ ಆತನಿಗೆ ಲಕ್ಷ್ಯವಿದೆ.'' ಆತನ ಬಳಿ ಬರುವವರನ್ನು ಎಂದಿಗೂ ತಳ್ಳಿ ಹಾಕುವುದಿಲ್ಲ.

ಯೇಸುವೇ ಸ್ತೋತ್ರ

ಹಬಕ್ಕೂಕ 1:5 ''ಜನಾಂಗಗಳ ಮಧ್ಯೆ ನಡೆಯುವುದನ್ನು ನೋಡಿರಿ, ನೋಡಿದರೆ ಬೆಕ್ಕಸ ಬೆರಗಾಗುವಿರಿ. ನಿಮ್ಮ ಕಾಲದಲ್ಲೇ ನಾನೊಂದು ಮಹತ್ ಕಾರ್ಯವನ್ನು ಮಾಡುವೆನು ....''

ನಾಲ್ಕು ತಿಂಗಳ ಹಿಂದೆ ನಾನು ಲಿಫ್ಟ್‌ನಲ್ಲಿರುವಾಗ ಇದ್ದಕ್ಕಿದ್ದಂತೆ ವಿದ್ಯುಚ್ಛಕ್ತಿಯ ತೊಂದರೆಯಿಂದ ಲಿಫ್ಟ್ ಮಧ್ಯದಲ್ಲೇ ನಿಂತು ಹೋಯಿತು. ತಕ್ಷಣವೇ ಮೆಕ್ಯಾನಿಕ್ಸ್ ಬಂದು ಲಿಫ್ಟ್ ಬಾಗಿಲನ್ನು ತೆರೆದು ಒಬ್ಬೊಬ್ಬರಾಗಿ ಹೊರಗೆ ತೆಗೆಯುತ್ತಿದ್ದಾಗ ಇದ್ದಕ್ಕಿದ್ದಂತೆ ಹೋಗಿದ್ದ ಕರೆಂಟ್ ಮತ್ತೆ ಬಂದ ಕಾರಣ ನನ್ನನ್ನು ರಭಸವಾಗಿ ಕೊಂಡೊಯ್ದು ಪಿಲ್ಲರ್‌ಗೆ ಹೊಡೆದು ಬೀಳಿಸಿತು. ತಕ್ಷಣವೇ ನನ್ನನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋದರು. ನನ್ನನ್ನು ಪರೀಕ್ಷಿಸಿದ ವೈದ್ಯರು 97% ನಾನು ಬದುಕಲು ಸಾಧ್ಯವೇ ಇಲ್ಲ ಸಾಯುವುದು ಖಚಿತ ಎಂದರು. ಕಾರಣ ನನ್ನ ಬೆನ್ನೆಲುಬು ಮೆದುಳೂ ನಿಷ್ಕ್ರಿಯೆಯಾಗಿ ಶರೀರ ಗಾಯಗೊಂಡು ಮುಖಭಾಗ ಗಾಯದಿಂದ ತುಂಬಿತ್ತು. ಆಗ ನನ್ನ ಸ್ನೇಹಿತರು ಆರ್‌ಆರ್‌ಸಿ ಧ್ಯಾನಕೇಂದ್ರಕ್ಕೆ ಬಂದು ಗುರುಗಳ ಬಳಿ ಪ್ರಾರ್ಥಿಸಲು ಕೇಳಿಕೊಂಡರು.

ಬಲಿಪೂಜೆ ಮತ್ತು ಆರಾಧನೆಯಲ್ಲಿ ಗುರುಗಳೂ ವಿಶೇಷವಾಗಿ ನನ್ನನ್ನು ಸಮರ್ಪಿಸಿ ನನಗಾಗಿ ಪ್ರಾರ್ಥಿಸಿದರು. ವೈದ್ಯರು ಡಿಸ್ಚಾರ್ಜ್ ಮಾಡುವಾಗ ಹೇಳಿದರು. ಈತ ಜೀವನವಿಡೀ ಏನೂ ಕೆಲಸ ಮಾಡಲು ಸಾಧ್ಯವಿಲ್ಲ, ಬಿದ್ದಸ್ಥಳದಲ್ಲಿಯೇ ಬಿದ್ದಿರಬೇಕು. ಕಣ್ಣಿನ ತೊಂದರೆ, ಮೆದುಳು ಮತ್ತು ಬೆನ್ನೆಲುಬು ತೊಂದರೆ ಜೀವನವಿಡೀ ಇರುತ್ತದೆ ಎಂದರು. ಆದರೆ ಪ್ರಾರ್ಥನೆ ಮೂಲಕ ದಿನೇ ದಿನೇ ಚೇತರಿಸಿಕೊಂಡು ಈಗ ಯಾವುದೇ ತೊಂದರೆಯಿಂದ ಪೂರ್ಣ ಆರೋಗ್ಯದಿಂದ ಇದ್ದೇನೆ. ವೈದ್ಯರು ನನ್ನನ್ನು ಕಂಡು ಆಶ್ಚರ್ಯಪಟ್ಟರು. ಸೌಖ್ಯಕೊಟ್ಟ ಪ್ರಭು ಯೇಸುವಿಗೆ ಕೋಟಿ ಸ್ತೋತ್ರಗಳನ್ನು ಸಲ್ಲಿಸುತ್ತಾನೆ.

ಅಮಲು, ಕ್ರೈಸ್ಟ್ ಯೂನಿವರ್ಸಿಟಿ, ಬೆಂಗಳೂರು

ಮಗುವಿನ ಅನುಗ್ರಹದಿಂದ ಆಶೀರ್ವದಿಸಲ್ಪಟ್ಟೆನು

ಮದುವೆಯಾಗಿ 3 ವಷರ ಕಳೆದಿದ್ದರೂ ನನ್ನ ಮಗಳಿಗೆ ಮಕ್ಕಳಿರದೇ ಬಹಳವಾಗಿ ಜೀವನದಲ್ಲಿ ನೊಂದಿದ್ದಳು. 10-09-2015ನೇ ತಾರೀಖು ಭಾನುವಾರದ ದಿನ ಆರ್‌ಆರ್‌ಸಿ ಧ್ಯಾನಕೇಂದ್ರದಲ್ಲಿ ಆರಾಧನೆಯಲ್ಲಿ ವಿಶೇಷವಾಗಿ ನನ್ನ ಮಗಳಿಗಾಗಿ ಪ್ರಾರ್ಥಿಸುತ್ತಿದ್ದೆ. ಆ ಸಮಯದಲ್ಲಿ ಗುರುಗಳು ಈ ಸಮೂಹದಲ್ಲಿ ಐದು ಜನರಿಗೆ ಸಂತಾನ ಭಾಗ್ಯ ದೇವರು ನೀಡುತ್ತಿದ್ದಾರೆ ಎಂದು ಸಂದೇಶ ನೀಡಿದರು. ಆಗ ನಾನು ನನ್ನ ಮಗಳಿಗೂ ದೇವರು ನೀಡುತ್ತಿದ್ದಾರೆಂದು ವಿಶ್ವಾಸಿಸಿದೆ. ಮುಂದಿನೇ ತಿಂಗಳಲ್ಲೇ ನನ್ನ ಮಗಳೂ ಗರ್ಭಧರಿಸಿ 31-05-2016ನೇ ದಿನದಂದು ಹೆಣ್ಣುಮಗುವಿಗೆ ಜನ್ಮ ನೀಡಿದಳು. ನಮ್ಮ ಕುಟುಂಬಕ್ಕೆ ಮಗುವನ್ನು ಕೊಟ್ಟು ಆಶೀರ್ವದಿಸಿದ ಪ್ರಭು ಯೇಸುವಿಗೆ ಸ್ತೋತ್ರವಾಗಲಿ.

ಜಾನ್, ಅರಕೆರೆ

ಅಪೆಂಡಿಕ್ಸ್‌ನಿಂದ ಬಿಡುಗಡೆ

ನನ್ನ 5 ವರ್ಷದ ಮಗಳು ಚಿನ್ನು ಕೆಲವು ದಿನಗಳಿಂದ ಬಹಳ ಹೊಟ್ಟೆ ನೋವಿನಿಂದ ನರಳುತ್ತಿದ್ದಳು. ಸೆಂಟ್ ಜಾನ್ಸ್ ಆಸ್ಪತ್ರೆಯಲ್ಲಿ ಹೊಟ್ಟೆ ಸ್ಕ್ಯಾನ್ ಮಾಡಿ ನೋಡಿದಾಗ ಅವಳಿಗೆ ಅಪೆಂಡಿಕ್ಸ್ ರೋಗಿವಿದುದ ಅದು ಬಹಳ ಗಂಭೀರ ಪರಿಸ್ಥಿತಿಯಿರುವ ಕಾರಣ ತಕ್ಷಣವೇ ಆಪರೇಷನ್ ಮಾಡಬೇಕೆಂದು ಡಾಕ್ಟರ್ಸ್ ಹೇಳಿದಾಗ ನಮಗೆ ತುಂಬಾ ಭಯವಾಯಿತು. ನಮ್ಮ

ಕುಟುಂಬಸ್ಥರು ಕೇರಳದಲ್ಲಿ ಇರುವ ಕಾರಣ ನಾನು ಮಗಳನ್ನು ಕರೆದುಕೊಂಡು ಕೇರಳಕ್ಕೆ ಹೋದೆ. ಕೇರಳದಲ್ಲಿರುವ ಕೊಲ್ಲಂ ನಗರ ಆಸ್ಪತ್ರೆಯಲ್ಲಿ ಪರಿಶೀಲಿಸಿದ ವೈದ್ಯರು ಪರಿಸ್ಥಿತಿ ಬಹಳ ಗಂಭೀರವಾಗಿರುವ ಕಾರಣ ಮತ್ತು ಅನಸ್ತೇಶಿಯಾ ಕೊಡಲು ಮಗು ಚಿಕ್ಕವಳಾಗಿರುವ ಕಾರಣ ಬೇರೊಂದು ದೊಡ್ಡ ಆಸ್ಪತ್ರೆಗೆ ತೆಗೆದುಕೊಂಡು ಹೋಗಿ ಎಂದರು. ತಿರುವನಂತಪುರದ ಸ್ಯಾಟ್ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಈ ಸಮಯದಲ್ಲಿ ನಮ್ಮ ಕುಟುಂಬದ ಇನ್ನಿತರರು ಆರ್‌ಆರ್‌ಸಿ ಧ್ಯಾನಕೇಂದ್ರಕ್ಕೆ ಬಂದು ಅಲ್ಲಿಯ ಗುರುಗಳಿಂದ ಮಗುವಿಗಾಗಿ ಪಾರರ್ಥಿಸಲು ಕೇಳಿಕೊಂಡೆವು. ಸ್ಯಾಟ್ ಆಸ್ಪತ್ರೆಯಲ್ಲಿ ಮತ್ತೊಮ್ಮೆ ಸ್ಕ್ಯಾನಿಂಗ್ ತೆಗೆದಾಗ ವೈದ್ಯರಿಗೆ ಆಶ್ಚರ್ಯವಾಯಿತು. ಆ ಸ್ಕ್ಯಾನಿಂಗ್‌ನಲ್ಲಿ ಅಪೆಂಡಿಕ್ಸ್ ರೋಗದ ಲಕ್ಷಣಗಳೇನೂ ಇಲ್ಲವೇ ಇಲ್ಲ. ಮಗು ಆರೋಗ್ಯಕರವಾಗಿದೆ ಎಂದು ತಿಳಿಸಿದರು. ಅದ್ಭುತಕರವಾದ ರೀತಿಯಲ್ಲಿ ನನ್ನ ಮಗಳಿಗೆ ಸೌಖ್ಯ ಕೊಟ್ಟ ಯೇಸು ದೇವರಿಗೆ ಹೃತ್ಪೂರ್ವಕ ವಂದನೆ ಸ್ತೋತ್ರವಾಗಲಿ.

ಸನಾಲ್. ಜೆ, ಬಿಟಿಎಂ 1ನೇ ಹಂತ

ಸಂತ ಲೂಯಿಸ್ ಮಾರ್ಟಿನ್ ಮತ್ತು ಜೆಲೈ ಗ್ಯೂರಿನ್‌ರ ಮಧ್ಯಸ್ತಿಕೆ ಮೂಲಕ ದೊರಕಿದ ಸೌಖ್ಯ.

ನನ್ನ ಸಹೋದರಿ ಎರಡನೇ ಮಗುವಿಗೆ ಗರ್ಭಿಣಿಯಾಗಿದ್ದಾಗ ಜ್ವರ ಬಂದು ಆಕೆಯ ಶರೀರದಲ್ಲಿ ಕೆಂಪಾದ ರ್‍ಯಾಶಸ್ ತುಂಬಿಕೊಂಡಿತ್ತು ಮತ್ತು ಆಕೆಯಲ್ಲಿ ರಕ್ತಹೀನತೆ ಮತ್ತು ಅನಾರೋಗ್ಯದಿಂದ ಬಳಲುತ್ತಿದ್ದಳು. ಆಕೆಯನ್ನು ಪರೀಕ್ಷಿಸಿದ ವೈದ್ಯರು ಇದರಿಂದ ಗರ್ಭದಲ್ಲಿರುವ ಮಗು ಕೆಲವು ನ್ಯೂನತೆ ಅಥವಾ ತೊಂದರೆ ಆಗುವ ಸಂಭವವಿದೆ ಎಂದು ಹೇಳಿಬಿಟ್ಟರು.

ಆ ಸಮಯದಲ್ಲಿ ಆರ್‌ಆರ್‌ಸಿ ಧ್ಯಾನಕೇಂದ್ರದಲ್ಲಿ ಸಂತ ಲೂಯಿಸ್ ಮಾರ್ಟಿನ್ ಮತ್ತು ಜೆಲೈ ಗ್ಯೂರಿನ್‌ರವರ ರಿಲಿಕ್ಸ್ ಅನ್ನು ಪ್ರದರ್ಶಿಸಿ ಪ್ರಾರ್ಥನೆ ನಡೆಯುತ್ತಿತ್ತು. ನಾನು ಆ ಪ್ರಾರ್ಥನೆಯಲ್ಲಿ ಭಾಗವಹಿಸಿ ನನ್ನ ಸಹೋದರಿಗಾಗಿ ಪ್ರಾರ್ಥಿಸಿದೆ. ಅದ್ಭುತಕರವಾದ ರೀತಿಯಲ್ಲಿ ನನ್ನ ಸಹೋದರಿ ಗಂಡು ಮಗುವಿಗೆ ಜನ್ಮ ಕೊಟ್ಟಳು. ತಾಯಿ ಮತ್ತು ಮಗು ಆರೋಗ್ಯವಾಗಿದ್ದಾರೆ. ನಮ್ಮ ಪ್ರಾರ್ಥನೆ ಆಲಿಸಿ ನಮ್ಮನ್ನು ಆಶೀರ್ವದಿಸಿದ ದೇವರಿಗೆ ಮಹಿಮೆಯಾಗಲಿ.

ಎಲ್‌ಡೋ ಪೌಲ್, ಕೊತ್ತೆಲಿಲ್, ಮನಂತವಾಡಿ

ಮಗುವಿನ ಅನುಗ್ರಹದಿಂದ ಆಶೀರ್ವದಿಸಲ್ಪಟ್ಟೆನು

ಮದುವೆಯಾದ ಒಂದೂವರೆ ವರ್ಷಕ್ಕೆ ನನ್ನ ಪತ್ನಿ ಗರ್ಭಿಣಿಯಾದಳು. ಆದರೆ ಎರಡು ತಿಂಗಳಿರುವಾಗ ಆಕೆಗೆ ಗರ್ಭಪಾತವಾಯಿತು. ಅನಂತರ ಆರು ತಿಂಗಳ ನಂತರ ಪುನಃ ನನ್ನ ಪತ್ನಿ ಗರ್ಭಿಣಿಯಾದಳು. 5 ತಿಂಗಳಿರುವಾಗ ಸ್ಕ್ಯಾನ್ ಮಾಡಿದ ವೈದ್ಯರು ಹೇಳಿದರು. ಗರ್ಭಕೋಶದಲ್ಲಿ ನೀರಿನಂಶ ಅಧಿಕವಾಗಿ ತಲೆ

ಮತ್ತು ಕಿಡ್ನಿ ಭಾಗದಲ್ಲಿರುವುದರಿಂದ ಹುಟ್ಟುವ ಮಗು ಅಂಗವಿಕಲತೆಯಿಂದ ಅಥವಾ ಬುದ್ಧಿ ಮಾಂದ್ಯ ಮಗುವಾಗಿ ಜನಿಸಬಹುದು. ಆದ್ದರಿಂದ ತಕ್ಷಣವೇ ಗರ್ಭಪಾತ ಮಾಡಬೇಕೆಂದು ಎಚ್ಚರಿಸಿದರು. ನಾವು ಅನೇಕ ಪರಿಣತ ವೈದ್ಯರನ್ನು ಸಂಪರ್ಕಿಸಿ ಸಲಹೆ ಕೇಳಿದಾಗ ಎಲ್ಲರೂ ಇದನ್ನೇ ಹೇಳಿದರು. ನೋವಿನಿಂದ ತುಂಬಿದ್ದ ನಾವು ಆರ್‌ಆರ್‌ಸಿ ಧ್ಯಾನಕೇಂದ್ರದ ಗುರುಗಳ ಬಳಿ ಮಗುವಿಗಾಗಿ ಪ್ರಾರ್ಥಿಸಲು ಕೇಳಿಕೊಂಡೆವು. ಗುರುಗಳು ಮಗುವಿಗಾಗಿ ಪ್ರಾರ್ಥಿಸಿದರು. ಮುಂದಿನ ತಿಂಗಳು ಸ್ಕ್ಯಾನ್ ಮಾಡಿಸಿದಾಗ, ಆಶ್ಚರ್ಯಕರ ರೀತಿಯಲ್ಲಿ ನೀರಿನಂಶ ನಾರ್ಮಲ್ ಪರಿಸ್ಥಿತಿಗೆ ಬಂದಿತ್ತು. ನನ್ನ ಪತ್ನಿಗೆ ದೇವರು ಯಾವುದೇ ನ್ಯೂನತೆಯಿಲ್ಲದೆ ಆರೋಗ್ಯಕರವಾದ ಗಂಡು ಮಗುವನ್ನು ನೀಡಿ ಆಶೀರ್ವದಿಸಿದ ಪ್ರಭು ಯೇಸುವಿಗೆ ಕೃತಜ್ಞತಾ ಸ್ತುತಿ ಸ್ತೋತ್ರಗಳನ್ನು ಸಲ್ಲಿಸುತ್ತೇವೆ.

ಅಜಿತ್ ಮತ್ತು ಪ್ರೀತಿ, ಕುರಿಸು ಮೂಟ್ಟಿಲ್
ಚಕ್ಕಿಟ್ಟಾಪ್ಪಾರ, ಕ್ಯಾಲಿಕಟ್

ಕಿಡ್ನಿ ರೋಗದಿಂದ ಸೌಖ್ಯ

ಕೆಲವು ದಿನಗಳ ಹಿಂದೆ ನನ್ನ ಕಾಲುಗಳಲ್ಲಿ ನೋವು ಮತ್ತು ಊತ ಕಾಣಿಸಿಕೊಂಡಿತು. ಮಾರನೇ ದಿನ ವೈದ್ಯರಲ್ಲಿ ಹೋದಾಗ ಅವರು ರಕ್ತ ಮತ್ತು ಕಿಡ್ನಿ ಪರೀಕ್ಷೆಗಾಗಿ ಬರೆದುಕೊಟ್ಟರು. ಅದಕ್ಕೆ ಸ್ಯಾಂಪಲ್ಸ್ ಕೊಟ್ಟು ಆ ನಂತರ ಆರ್‌ಆರ್‌ಸಿ ಧ್ಯಾನ ಕೇಂದ್ರಕ್ಕೆ ಬಂದು ಕಣ್ಣೀರಿನಿಂದ ಪ್ರಾರ್ಥಿಸಿದೆ. ನಂತರ ರಿಪೋರ್ಟ್ ಬಂದಾಗ ಅದರಲ್ಲಿ ಪೊಟ್ಯಾಶಿಯಂ ಮತ್ತು ರಕ್ತದ ಅಳತೆ ಅಧಿಕವಾಗಿದ್ದು ಅದು ಕಿಡ್ನಿಗೆ ತೊಂದರೆಯಾಗುವ ಸಂಭವವಿರುವುದರಿಂದ ವೈದ್ಯರು ಮತ್ತೊಂದು ಡಿಟೈಲ್ಡ್ ಟೆಸ್ಟ್ ಮಾಡಬೇಕೆಂದು ಹೇಳಿದರು. ಮತ್ತೆ ರಕ್ತ ಮತ್ತು ಕಿಡ್ನಿ ಪರೀಕ್ಷೆಗೆ ಸ್ಯಾಂಪಲ್ ಕೊಟ್ಟು ನಾನು ಆರ್‌ಆರ್‌ಸಿಗೆ ಬಂದು ಗುರುಗಳ ಬಳಿ ನನಗಾಗಿ ಪ್ರಾರ್ಥಿಸಲು ಕೇಳಿಕೊಂಡೆ. ಗುರುಗಳು ನನಗಾಗಿ ಪ್ರಭು ಯೇಸುಕ್ರಿಸ್ತರಲ್ಲಿ ಪ್ರಾರ್ಥಿಸಿದರು. ಮಾರನೆಯ ದಿನ ರಿಪೋರ್ಟ್ ಬಂದಾಗ ಅದನ್ನು ಪರಿಶೀಲಿಸಿದ ವೈದ್ಯರು ಹೇಳಿದರು ಎಲ್ಲವೂ ನಾರ್ಮಲ್ ಆಗಿದೆ ನಿಮಗೆ ಯಾವುದೇ ಚಿಕಿತ್ಸೆ ಬೇಕಾಗಿಲ್ಲ ಎಂದು ತಿಳಿಸಿದಾಗ ನನಗೆ ಬಹಳ ಸಂತೋಷವಾಯಿತು. ನನ್ನ ದುಃಖವನ್ನು ಸಂತೋಷವಾಗಿ ಮಾರ್ಪಡಿಸಿದ ದೇವರಿಗೆ ಸ್ತೋತ್ರವಾಗಲಿ.

ಕೃಪಾ ಮ್ಯಾಥ್ಯೂ, ಮಾರುತಿನಗರ, ಬೆಂಗಳೂರು